ಸೃಜನಿ
SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 39-46
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ವರ್ತಮಾನ ಕಾಲದ ಬಿಕ್ಕಟ್ಟು ಕುವೆಂಪು ಅವರ ವೈಚಾರಿಕ ಪ್ರಸ್ತುತತೆ

**ಡಾ. ಪ್ರೇಮ ಎಸ್**
ಕನ್ನಡ ಸಹಾಯಕ ಪ್ರಾಧ್ಯಾಪಕರು, ಮಲ್ಲಮ್ಮ ಮರಿಮಲ್ಲಪ್ಪ ಮಹಿಳಾ ಕಲಾ ಮತ್ತು
ವಾಣಿಜ್ಯ ಪದವಿ ಕಾಲೇಜು, ಮೈಸೂರು

***Abstract:***
*ಕನ್ನಡ ಸಾಹಿತ್ಯ ಲೋಕವು ಅಪ್ರತಿಮ ಕವಿಗಳಿಂದ ಕೂಡಿದ ನಾಡಾಗಿದೆ. ಯಾವುದೇ ನಾಡಿನಲ್ಲಿ ಕವಿಯೊಬ್ಬ ಹಲವು ವರ್ಗ ಮತ್ತು ಸಮುದಾಯಗಳ ಸಾಂಸ್ಕೃತಿಕ ಬದುಕನ್ನು ಆವರಿಸಿಕೊಂಡು, ಅವರನ್ನು ಚಿಂತನೆಗೆ ಹಚ್ಚುವ ಮಟ್ಟಕ್ಕೆ ಬೆಳೆದು ನಿಲ್ಲುವುದು ಅಪರೂಪದ ಸಂಗತಿ. ಅದರಲ್ಲೂ ಸಾಂಸ್ಕೃತಿಕ ಮತ್ತು ರಾಜಕೀಯ ಬಿಕ್ಕಟ್ಟಿನ ಈ ಕಾಲದಲ್ಲಿ, ಅಂತಹ ಸಾಹಿತಿಯ ಬರಹಗಳಲ್ಲಿ ಪರಿಹಾರ ಹುಡುಕುವ ಹಾಗೂ ಅವುಗಳಿಂದ ಪ್ರೇರಣೆ ಪಡೆಯುವ ಧೀಶಕ್ತಿಯನ್ನು ಕರುಣಿಸಿದ ಮಹನೀಯರು ಬಹಳ ವಿರಳ. ಭಾರತದಲ್ಲಿ ಇಂದಿಗೂ ಜಾತಿ–ಮತಗಳು ವ್ಯಕ್ತಿಯ ಗುರುತಾಗಿ ಪ್ರಜ್ಞಾಪೂರ್ವಕವಾಗಿ ಉಳಿದುಕೊಂಡಿವೆ. ಇಂತಹ ಸಂದರ್ಭದಲ್ಲಿಯೂ ಆ ಸಂಕುಚಿತ ಭಾವನೆಗಳನ್ನು ಮೀರುವಂತೆ ಕರೆ ನೀಡಿ, ಸಮಾಜದ ಕೆಡುಕುಗಳನ್ನು ಹೋಗಲಾಡಿಸಿ, ಹೊಸ ಸಾಂಸ್ಕೃತಿಕ ಹರಿವಿಗೆ ನಾಂದಿ ಹಾಡಿದ ರಾಷ್ಟ್ರಕವಿ ಕುವೆಂಪು ಅವರ ಪ್ರಸ್ತುತತೆ ಇಂದು ಹೆಚ್ಚುತ್ತಿದೆ. 'ಜಗತ್ತನ್ನು ಆಳುವುದು ವಿಚಾರಗಳೇ ಹೊರತು ವ್ಯಕ್ತಿಗಳಲ್ಲ' ಎಂಬ ಮಾತಿನಂತೆ, ಕುವೆಂಪು ಅವರು ಇಂದು ಭೌತಿಕವಾಗಿ ನಮ್ಮೊಂದಿಗಿಲ್ಲದಿದ್ದರೂ ಅವರ ವಿಚಾರಧಾರೆಗಳು ಜೀವಂತವಾಗಿವೆ. ಬುದ್ಧ, ಬಸವಣ್ಣ, ಅಂಬೇಡ್ಕರ್ ಅವರಂತೆ ಕುವೆಂಪು ಅವರೂ ವರ್ತಮಾನದ ಬಿಕ್ಕಟ್ಟುಗಳಿಗೆ ದಾರಿದೀಪವಾಗಬಲ್ಲ ಕವಿಯಾಗಿದ್ದಾರೆ. ವಿಶ್ವಮಾನವ ಸಂದೇಶ ಸಾರಿದ ಈ ಮಾನವತಾವಾದಿಯ ಚಿಂತನೆಗಳು ಇಂದಿಗೂ ಜನಮಾನಸದ ಜೀವಸೆಲೆಯಾಗಿ ಹರಿಯುತ್ತಿವೆ.*

**Keywords:** *ಕನ್ನಡ ಸಾಹಿತ್ಯ, ಕುವೆಂಪು, ವೈಚಾರಿಕತೆ, ವರ್ತಮಾನ.*

## ಪೀಠಿಕೆ

ವರ್ತಮಾನ ಕಾಲದ ಸ್ಥಿತಿಯನ್ನು ಗಮನಿಸುವುದಾದರೆ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಗತಿಯಾಗುತ್ತಿದ್ದರೂ, ಮೌಢ್ಯ ಅಂಧಶ್ರದ್ಧೆ ಅಳಿದಿಲ್ಲ. ಭಕ್ತಿ ಕೆಲವರಿಗೆ ಬಂಡವಾಳವಾಗಿದೆ. ಪ್ರಜೆಗಳಿಂದ ಪ್ರಭುಗಳಾದವರು ಸರ್ವಾಧಿಕಾರಿಗಳಾಗುತ್ತಿದ್ದಾರೆ. ವರ್ಗ ತರತಮ ಭಾವಗಳು ಬೆಳೆಯುತ್ತಲೇ ಇವೆ. ದೇಶದ ಸಂಪತ್ತು ಕೆಲವೇ ಶ್ರೀಮಂತರ ಪಾಲಾಗುತ್ತಿದೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಭಾವಗಳು ಬಳಲುತ್ತಿವೆ. ಮತಮೌಢ್ಯ, ಸ್ವಾರ್ಥ, ಅಧಿಕಾರ ಲಾಲಸೆ, ವಿಚಾರ ಶೂನ್ಯತೆ ಹಲವರನ್ನು ಆಕ್ರಮಿಸಿವೆ. ಕೋಮುವಾದ, ಭಯೋತ್ಪಾದನೆ, ರೈತ–ಕಾರ್ಮಿಕರ ದಿವಾಳಿತನ, ನಿರ್ಲಕ್ಷ್ಯಕ್ಕೊಳಗಾಗುತ್ತಿರುವ ಸಾಮಾಜಿಕ ನ್ಯಾಯದ ಪರಿಕಲ್ಪನೆ, ದಾರಿ ತಪ್ಪುತ್ತಿರುವ ಯುವಜನತೆ, ಹೊಲಸು ರಾಜಕಾರಣ ಮೊದಲಾದ ಸಮಸ್ಯೆಗಳ ತಾಂಡವತೆ; ಕಲೆ, ಸಾಹಿತ್ಯ, ಸಂಸ್ಕೃತಿಯ

**Please cite this article as:** ಪ್ರೇಮ ಎಸ್.. (2026). ವರ್ತಮಾನ ಕಾಲದ ಬಿಕ್ಕಟ್ಟು ಕುವೆಂಪು ಅವರ ವೈಚಾರಿಕ ಪ್ರಸ್ತುತತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(6), 39–46

ಹಿರಿಮೆಗರಿಮೆಗಳಿಗಿಂತ ಹಣ ಸಂಪಾದನೆ ಮುಖ್ಯವಾಗಿರುವುದು – ಹೀಗೆ ಅನೇಕ ವಿಚಾರಗಳಿಂದ ನಾವು ಭೌತಿಕವಾಗಿ ಬೆಳೆಯುತ್ತಿದ್ದರೂ ಮಾನಸಿಕವಾಗಿ ಕುಗ್ಗಿ ಹೋಗುತ್ತಿದ್ದೇವೆ. ಸುಸಂಸ್ಕೃತವಂತರು, ನಾಗರಿಕರು ಎನಿಸಿಕೊಳ್ಳುವ ಭರಾಟೆಯಲ್ಲಿ ಜೀವನ ಮೌಲ್ಯಗಳನ್ನು ಪತನದ ದಾರಿಗೆ ಕೊಂಡೊಯ್ಯುತ್ತಿದ್ದೇವೆ.

'ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ' – ಈ ಪಂಚಮಂತ್ರಗಳು ಬದುಕಿನ ದೃಷ್ಟಿಕೋನವಾಗಬೇಕು. ಎಂಬುದು ಕುವೆಂಪ ಅವರ ವಿಚಾರಧಾರೆಗಳಲ್ಲಿ ಪ್ರಮುಖವಾದುದು. ಈ ಮೂಲಕ ವಿಶ್ವಮಾನವರಾಗಬೇಕೆಂಬುದು ಇವರ ಆಶಯವಾಗಿತ್ತು. 'ಇಲ್ಲಿ ಯಾರೂ ಮುಖ್ಯರೂ ಅಲ್ಲ; ಅಮುಖ್ಯರೂ ಅಲ್ಲ'. ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ ಬೆಳೆಯುತ್ತಾ ನಾವು ಅವನನ್ನು ಅಲ್ಪ ಮಾನವನನ್ನಾಗಿ ಮಾಡುತ್ತೇವೆ. ಮತ್ತೆ ಅವನ್ನು ವಿಶ್ವಮಾನವನನ್ನಾಗಿ ಮಾಡುವುದೇ ಶಿಕ್ಷಣದ ಕರ್ತವ್ಯವಾಗಬೇಕು. ವೈಚಾರಿಕ ಪ್ರಗತಿ ವೈಜ್ಞಾನಿಕ ಮನೋಧರ್ಮಗಳ ಬಿತ್ತುವ ಮೂಲಕ ಬಡತನವನ್ನು ಬುಡಮಟ್ಟ ಕಿತ್ತೆಸೆಯಬೇಕು. ಮತಮೌಢ್ಯ, ವರ್ಣನೀತಿ, ಜಾತೀಯತೆ, ಅಸ್ಪೃಶ್ಯತೆ, ಅಸಮಾನತೆ ಇಂತಹ ಸಾಮಾಜಿಕ ಅನಿಷ್ಟಗಳು ತೊಲಗಬೇಕು ಎಂಬು ನಿಟ್ಟಿನಲ್ಲಿ ಮುನ್ನುಗ್ಗಬೇಕು ಎಂಬುದು ಇವರ ಮನೋಭಾವವಾಗಿದೆ.

ಕುವೆಂಪು ಕಾವ್ಯಗಳಲ್ಲಿ ಸಾಮಾಜಿಕ ಅಸಮಾನತೆಯ ವಿರುದ್ಧದ ಧ್ವನಿ, ಅನ್ಯಶಕ್ತಿಯ ಆಕ್ರಮಣದ ವಿರುದ್ಧ ಸಮಾಜ ಒಗ್ಗೂಡಬೇಕೆಂಬ ಆದರ್ಶ, ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಎಲ್ಲರೂ ಒಂದಾಗಿ ಹೋರಾಡಬೇಕೆಂಬ ನಿಲುವು ಕಾಣಿಸುತ್ತದೆ. ರಾಷ್ಟ್ರೀಯತೆಯ ಪರಿಕಲ್ಪನೆಯೇ ಸಮಾಜದಲ್ಲಿ ಕೆಲವು ಆಶಯಗಳನ್ನು ರೂಪಿಸುತ್ತದೆ. ನವೋದಯ ಕಾಲದ ಅನೇಕ ಕವಿಗಳು ಸಾಮಾಜಿಕ ಏಕತೆಗೆ ಭಂಗ ಬರಬಾರದೆಂದು ಜಾತಿ ಪದ್ಧತಿಯ ವಿರುದ್ಧ ಮೃದು ಧೋರಣೆ ತಳೆದಿದ್ದರು. ಆದರೆ ಕುವೆಂಪು ಅವರು ಯಾವುದೇ ಮುಲಾಜಿಲ್ಲದೆ ತಮ್ಮ ಕಾವ್ಯದ ಮೂಲಕ ಉಗ್ರವಾಗಿ ಪ್ರತಿಭಟಿಸಿದರು.

***"ನಡೆಮುಂದೆ ನಡೆಮುಂದೆ***
***ನುಗ್ಗಿ ನಡೆ ಮುಂದೆ***
***ಜಗ್ಗದೆಯೆ ಕುಗ್ಗದೆಯೆ***
***ಹಿಗ್ಗಿ ನಡೆಮುಂದೆ"*** ಎನ್ನುತ್ತಾ
***"ನಾಳೆ ನಾನಳಿವೆ ನೀನಳಿವೆ***
***ನಮ್ಮೆಲುಬುಗಳ ಮೇಲೆ***
***ಮೂಡುವುದು ಮೂಡುವುದು***
***ನವಭಾರತದ ಲೀಲೆ"***[2]

ನವಭಾರತದ ನಿರ್ಮಾಣ ಭಾರತೀಯರ ಕನಸಾಗಿತ್ತು. ಅದಕ್ಕಾಗಿ ಯುವಕರಲ್ಲಿ ಹೊಸ ಆಲೋಚನೆಗಳನ್ನು ತುಂಬಿ ಸಿದ್ಧಗೊಳಿಸಬೇಕೆಂಬ ಕುವೆಂಪು ಅವರ ತುಡಿತದ ಹೇಳಿಕೆ.

ಭಾರತೀಯ ಮನಸ್ಸು ಹಾಗೂ ಅವರ ಬದುಕಿನ ಅಧೋಗತಿಗೆ ಕಾರಣವೆಂದರೆ ಜಾತಿಯ ಹೆಸರಿನಲ್ಲಿ ಮನುಷ್ಯರನ್ನು ಕೀಳಾಗಿ ಕಾಣುವ ಪ್ರತ್ಯೇಕತಾವಾದಿ ಮನಃಸ್ಥಿತಿಯಾಗಿದೆ. ಈ ಪ್ರತ್ಯೇಕತಾವಾದಿತನ ಮನುಷ್ಯನ ಸಂತಸ ಮತ್ತು ಉತ್ಸಾಹದ ಚೇತನವನ್ನೇ ಕೊಂದುಹಾಕುತ್ತದೆ. ಇದರ ವಿರುದ್ಧ ನಿರಂತರ ಹೋರಾಟ ಅಗತ್ಯ ಎಂದೇಳುತ್ತಾ,

***ಹೋಗುತಿದೆ ಹಳೆಕಾಲ, ಹೊಸಕಾಲ ಬರುತಲಿದೆ***
***ಬರುತಲಿದೆ ಹೊಸದೃಷ್ಟಿ ಹೊಸ ಬಯಕೆಗಳಲಿ***
***ಹೋಗುತಿದೆ ಹಳೆಬಾಳು, ಹೊಸಬಾಳು ಬರುತಲಿದೆ***
***ಬರುತಲಿದೆ ಕುದಿಗೊಂಡ ತರುಣರೆದೆಗಳಲಿ***
***ತರುಣರಿರ ಎದ್ದೇಳಿ! ಎಚ್ಚರಗೊಳ್ಳಿ! ಕೇಳಿ!***[3]

ಎನ್ನುವ ಮಾತಲ್ಲಿ ಕರೆಯಲ್ಲಿ ಯುವ ಜನಾಂಗ ಸೋಮಾರಿತನ ಬಿಟ್ಟು ಸಂಘಟಿತರಾಗಿ ಮುನ್ನೆಡೆಯಬೇಕು. ಯುವಶಕ್ತಿ ಒಂದಾಗಿ ಸಾಗಿದರೆ ಅವರ ಹಾದಿಯನ್ನು ತಡೆಯುವ ಶಕ್ತಿ ಯಾರಿಗೂ ಇರುವುದಿಲ್ಲ ಎಂಬುದು ಕವಿಯ ಬೇಡಿಕೆ. ತರುಣರೇ

ಈ ಜಗದ ಚೈತನ್ಯ ಶೀಲರು ಅವರಿಂದಲೇ ಬದಲಾವಣೆ ಸಾಧ್ಯ ಎನ್ನುವ ಅದಮ್ಯ ನಂಬಿಕೆ ಕುವೆಂಪು ಅವರಿಗಿತ್ತು. ಹಣ್ಣೆಲೆ ಉದುರಿದಾಗ, ಹೊಸ ಚಿಗುರು ಮೂಡುವುದು ಜೀವಂತ ಮರದ ಲಕ್ಷಣ. ಅಂತೆಯೇ ಒಂದು ರಾಷ್ಟ್ರದ ಸಂಸ್ಕೃತಿಯೂ ಸಹ. ಕಾಲಕಾಲಕ್ಕೆ ಹಳತು ಉದುರಿ ಹೊಸ ಚಿಗುರು ಹಸುರಾಗಬೇಕು. ಹಳೆಯ ಕೊಳೆಯೆಲ್ಲ ಕೊಚ್ಚಿ ಹೋಗಬೇಕು. ಹೊಸ ನೀರು ಹರಿಯಬೇಕು. ಇದರ ಗುರುತರವಾದ ಹೊಣೆಗಾರಿಕೆ ಯುವಜನತೆಯ ಕೈಯಲಿದೆ. ಲೋಕದ ಬದಲಾವಣೆ ಕೇವಲ ಯುಜನತೆಯಿಂದ ಮಾತ್ರ ಸಾಧ್ಯ ಎಂಬುದು ಕುವೆಂಪು ಅವರ ಅಚಲ ನಂಬಿಕೆ. ಈ ಹಿನ್ನೆಲೆಯಲ್ಲಿ

***"ಹಳೆಮತದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ***
***ಕೊಚ್ಚಿಹೋಗಲಿ; ಬರಲಿ ವಿಜ್ಞಾನ ಬುದ್ಧಿ***
***ವೇದ ಪ್ರಮಾಣತೆಯ ಮರು ಮರೀಚಿಕೆಯಲ್ಲಿ***
***ನೀರರಸಿ ಕೆಡದಿರಲಿ ಸ್ವಾತಂತ್ರ್ಯ ಸಿದ್ಧಿ***
***ತರುಣರಿರ ಎದ್ದೇಳಿ! ಎಚ್ಚರಗೊಳ್ಳಿ! ಬಾಳಿ!"*** [4]

ಇದು ತರುಣರಿಗೆ ಕುವೆಂಪು ನೀಡಿದ ಸ್ವಾತಂತ್ರ್ಯ ದೀಕ್ಷಾಮಂತ್ರ. ವಿಚಾರಶೀಲತೆಗೆ ಅಡ್ಡಗೋಡೆಯಾಗಿರುವ ವೈಜ್ಞಾನಿಕ ಪ್ರಜ್ಞೆಗೆ ಉಸಿರುಗಟ್ಟಿಸುವ ಮತ ಮೌಢ್ಯದ ಮುಗ್ಗುಲು ವಾಸನೆ ತುಂಬಿರುವ ಗುಡಿ ಚರ್ಚು ಮಸೀದಿಗಳ ಗರ್ಭ ಗುಡಿಗಳನ್ನು ತೊರೆದು ಬರದಿದ್ದರೆ ನಮ್ಮ ತರುಣರಿಗೆ ಉದ್ಧಾರವಿಲ್ಲ ಎಂಬುದು ಕವಿಯ ಕರೆಯಲ್ಲಿರುವ ಕಾಳಜಿ. ಮೌಢ್ಯದ ಮಾರಿಯನು ಗೆಲ್ಲಬೇಕು. ಅಲ್ಲಿ ವಿಜ್ಞಾನ ದೀವಿಗೆಯ ಬೆಳಗಬೇಕು ಎಂದು ಒತ್ತಾಯಿಸುತ್ತಾರೆ.

ನಮ್ಮ ಪರಂಪರೆಯಲ್ಲಿ ಶತಮಾನಗಳಿಂದ ಮನುಷ್ಯನ ಸೃಜನಶೀಲತೆ ಮತ್ತು ಆತನ ಕಲ್ಪನಾಶಕ್ತಿಯನ್ನೇ ಹೊಸಕಿ ಹಾಕಿದ್ದ ಜಾತಿಪದ್ಧತಿ, ಮೌಢ್ಯ, ಕಂದಾಚಾರ ಇವುಗಳ ವಿರುದ್ಧ ಸಿಡಿದು ನಿಲ್ಲುವ ಕ್ರಾಂತಿಕಾರಿ ಮನೋಭಾವ ಕವಿಯದು. ಇತ್ತೀಚಿನ ದಿನಗಳಲ್ಲಿ ಜಾತಿ, ಮತ ಮತ್ತು ವರ್ಣ ಸಮಸ್ಯೆ ಸಮಾಜದಲ್ಲಿ ಬಹುದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಇವುಗಳ ಬಗ್ಗೆ ಕುವೆಂಪು ಅವರ ಮಾತುಗಳು ಇಂತಿವೆ: "ವರ್ಣ ಜಾತಿ ವರ್ಗಗಳನ್ನು ಆ ದೇವರೇ ಸೃಷ್ಟಿ ಮಾಡಿದ್ದರೂ ಅವನ್ನೆಲ್ಲ ಇಂದು ಸರ್ವೋದಯಕ್ಕಾಗಿ ನಾವು ಧ್ವಂಸ ಮಾಡಬೇಕಾಗುತ್ತದೆ. ಕಾಲರಾ, ಪ್ಲೇಗು, ಮಲೇರಿಯಾಗಳನ್ನು ದೇವರೇ ಸೃಷ್ಟಿ ಮಾಡಿದ್ದು ಅಂತಾ ಹೇಳಿ ನಾವು ಸುಮ್ಮನಿರುವುದಕ್ಕೆ ಆದೀತೆ? ಅನಾರೋಗ್ಯಕರವೂ ಮೃತ್ಯುಕರವೂ ಆಗಿರುವ ಅವನ್ನೆಲ್ಲ ನಾಶಪಡಿಸಿ ನಮ್ಮ ಆರೋಗ್ಯವನ್ನು ನಾವು ರಕ್ಷಿಸಿಕೊಳ್ಳುವಂತೆ ವರ್ಣ ಜಾತಿ ವರ್ಗ ಮೊದಲಾದ ದುರ್ಭಾವನೆಗಳನ್ನೆಲ್ಲ ಧ್ವಂಸ ಮಾಡಿ ಸಮಾಜ ಕ್ಷೇಮವನ್ನು ಸಾಧಿಸಬೇಕು. ವರ್ಣಾಶ್ರಮ, ಜಾತಿಪದ್ಧತಿ ಮೇಲು ಕೀಳು ಭಾವನೆ ಮುಂತಾದ ಮಧ್ಯಯುಗದ ಕ್ರೂರ ಕರಾಳ ತತ್ವಗಳೆಲ್ಲ ವೈಜ್ಞಾನಿಕ ದೃಷ್ಟಿಯ ಅಗ್ನಿಕುಂಡದಲ್ಲಿ ಭಸ್ಮೀಕೃತವಾಗಬೇಕು."[5] ಎಂದು ವ್ಯಕ್ತಪಡಿಸುತ್ತಾರೆ.

ಕುವೆಂಪು ಅವರ ದೃಷ್ಟಿಯಲ್ಲಿ ಮತ ಎಂಬುದು ನಮಗೊಂದು ದೊಡ್ಡ ಬಂಧನಾಗಿದೆ. ಅದು ಈ ನಾಡಿನ ಪ್ರಗತಿಯ ಕುತ್ತಿಗೆಗೆ ಬಿದ್ದ ಉರುಳಾಗಿದೆ ಎನ್ನುತ್ತಾ ಜಾತಿ, ಮತ, ದೇವರುಗಳ ನೆಲೆಗಳಿಂದ ಹೊರಬಂದು, ಪ್ರಕೃತಿಯಲ್ಲಿ ನಾವೆಲ್ಲರೂ 'ಮನುಜ ಮತ' ಎಂಬ ಒಂದೇ ಗುಂಪಿನವರು ಎಂಬ ವಾಸ್ತವವನ್ನು ಅರಿತುಕೊಳ್ಳಬೇಕು ಅನಿವಾರ್ಯತೆ ಇಂದಿನ ದಿನಗಳಲ್ಲಿ ಹೆಚ್ಚಾಗಿದೆ. ಪರಸ್ಪರ ಸಹಬಾಳ್ವೆ, ಒಲವು, ನಲಿವು, ನೆಮ್ಮದಿಯಿಂದ ಜತೆಗೂಡಿ ಬಾಳಬೇಕೆಂಬ ಕರೆಯನ್ನು ಕುವೆಂಪು ಲೋಕದ ಜನಸಮುದಾಯಕ್ಕೆ ನೀಡುತ್ತಾರೆ. ಕುವೆಂಪು ಅವರು ಒಂದಕ್ಕೊಂದು ಸಂಬಂಧವುಳ್ಳ ಬಡತನ, ಮೌಢ್ಯ ಪ್ರಗತಿ, ವೈಜ್ಞಾನಿಕ ಮನೋಭಾವಗಳನ್ನು ಪ್ರಬಲವಾಗಿ ಪ್ರತಿಪಾದಿಸುವ ನಿಲುವು ಇವರದು.

***"ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ;***
***ಮತಿಯಿಂದ ದುಡಿಯಿರೈ ಲೋಕಹಿತಕೆ.***
***ಆ ಮತದ ಈ ಮತದ ಹಳೆಮತದ ಸಹವಾಸ***

***ಸಾಕಿನ್ನು ಸೇರಿರೈ ಮನುಜ ಮತಕೆ.***
***ಓ, ಬನ್ನಿ, ಸೋದರರೆ, ವಿಶ್ವಪಥಕೆ!"*** [6]

ಪೂಜಾರಿಕೆ ಎಂಬುದು ಒಂದು ವರ್ಗದ ಹಕ್ಕಾಗಿರಬಾರದು. ಭಕ್ತಿ ಮತ್ತು ನೀತಿ ಇರುವ ಯಾರೇ ಆದರೂ ಆ ಜವಾಬ್ದಾರಿ ಹೊರಲು ಅರ್ಹರಿರಬೇಕು ಎಂದು ಹೇಳುತ್ತಾ "ದೇವಾಲಯಗಳು ಕೆಟ್ಟವೆಂದು ನಾನು ಹೇಳುವುದಿಲ್ಲ. ಪೌರೋಹಿತ್ಯ ತೊಲಗಬೇಕು. ಶೋಷಕ ಕೃತ್ಯಗಳಿಂದ ಮುಗ್ಧರು ಪಾರಾಗಬೇಕು. ನೀತಿವಂತರಾದ ಯಾರಾದರೂ ಪೂಜಾರಿಗಳಾಗುವಂತಿರಬೇಕು. ಪೂಜಾರಿತನ ಅನುವಂಶಿಕ ವಾಗಿರಬಾರದು. ಜನ ತಾವೇ ನೇರವಾಗಿ, ದಳ್ಳಾಳಿಯ ನೆರವಿಲ್ಲದೆಯೇ ಪೂಜೆ ಮಾಡಿಕೊಳ್ಳುವಂತಿರಬೇಕು. ಕಾಲಕ್ರಮೇಣ ದೇವಾಲಯ ವ್ಯವಸ್ಥೆಯಲ್ಲಿ ಕ್ರಾಂತಿಯಾಗಬೇಕು."[7] ಎಂಬ ನಿಲುವನ್ನು ವ್ಯಕ್ತಪಡಿಸುತ್ತಾರೆ.

ವಿಜ್ಞಾನವೆಂಬ ಹೊಸಮತಕ್ಕೆ ಸೇರಿದಾಗ ಮಾತ್ರ ವಿಶ್ವಶಾಂತಿಯ ಕನಸು ನನಸಾಗಲು ಸಧ್ಯ. ನಾಡಿನ ಅಶಾಂತಿಗೆ, ಅನಭಿವೃದ್ಧಿಗೆ, ರಕ್ತಪಾತಕ್ಕೆ ಮತೀಯ ಗಲಭೆಗಳು, ಕೋಮು ಕಲಹಗಳೇ ಮುಖ್ಯಕಾರಣವಾಗಿವೆ. ಉದಾಹರಣೆಗೆ ತೊಂಭತ್ತರ ದಶಕದಲ್ಲಿ ಅಯೋಧ್ಯೆಯ ಹಳೆ ಮಸೀದಿಯನ್ನು ಕೋಮುವಾದಿಗಳು ಕೆಡುವುದರೊಂದಿಗೆ ಮುರಿದುಬಿದ್ದ ಹಿಂದೂ–ಮುಸ್ಲಿಂ ಸೌಹಾರ್ದದ ಸೇತುವೆ ದುರಸ್ತಿ ಕಾಣಲು ಎಷ್ಟೋ ವರ್ಷಗಳು ಬೇಕಾಯಿತು. ಆದ್ದರಿಂದ ಕವಿವಾಣಿ ಎಚ್ಚರಿಸುತ್ತಿದೆ: "ಆ ಮತದ ಈ ಮತದ ಹಳೆಮತದ ಸಹವಾಸ, ಸಾಕಿನ್ನು ಸೇರಿರೈ ಮನುಜಮತಕೆ, ಓ, ಬನ್ನಿ ಸೋದರರೆ ವಿಶ್ವಪಥಕೆ!" ಎಂದು ಪ್ರಾರ್ಥಿಸುತ್ತದೆ. ಹಾಗಾಗಿ ಹಳೆಯ ಮತೀಯ ಸಂಕೋಲೆಗಳಿಂದ ವೈಜ್ಞಾನಿಕ ಮನೋಭಾವವನ್ನು ಅಳವಡಿಸಿಕೊಂಡಾಗ ಮಾತ್ರ ಅಶಾಂತಿ ಮತ್ತು ನಿಲ್ಲಲು ಸಾಧ್ಯವಾಗುತ್ತದೆ.

ಕೇಂದ್ರ ಸರ್ಕಾರ ಕೊಟ್ಟ, ಕರ್ನಾಟಕ ರಾಜ್ಯ ಜಾರಿಗೆ ತಂದಿರುವ 'ರಾಷ್ಟ್ರೀಯ ಶಿಕ್ಷಣ ನೀತಿ 2020'ರ ಕಾಯಿದೆಯು ಕುವೆಂಪು ಕೊಟ್ಟ ಪ್ರಗತಿ ಕರೆಗೆ ತದ್ವಿರುದ್ಧವಾಗಿದೆ. ಈ ಕಾಯಿದೆಯು ಸಂಪೂರ್ಣವಾಗಿ ಕಾರ್ಯಗತವಾದರೆ ವರ್ತಮಾನ ಭಾರತವು ಪೂರ್ವಯುಗಕ್ಕೆ ಜಾರುವ ಅಪಾಯ ತಪ್ಪಿದ್ದಲ್ಲ. ಸದ್ಯದ ಪಠ್ಯಪುಸ್ತಕ ಪರಿಷ್ಕರಣೆಯು ಅದರ ಪೂರ್ವಭಾವಿ ತಾಲೀಮು ಅಷ್ಟೆ. ಜಾತೀಯತೆ, ಪಿತೃಪ್ರಧಾನತೆ, ಮೂಲಭೂತವಾದವನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತಿ ಬೆಳೆಸಲಿಕ್ಕೆ ರಾಜಕೀಯ ಪಕ್ಷಗಳು ಹಾಕಿರುವ ಭದ್ರ ಬುನಾದಿ ಇದಾಗಿದೆ. ವರ್ಗ, ವರ್ಣ, ಜಾತಿ, ಲಿಂಗ ತಾರತಮ್ಯಗಳನ್ನು ಕಳೆದು ಇಲ್ಲಿ ಸಮಬಾಳು ಸಮಪಾಲು ಎಂಬ ಸಮಸಮಾಜದ ಬುಡ ಅಲುಗಾಡುವ ಸಾಧ್ಯತೆ ಇದೆ. ಇತಿಹಾಸವನ್ನು ಸರಿಪಡಿಸುವ ಸೋಗಿನಲ್ಲಿ ನೈಜ ಇತಿಹಾಸಕ್ಕಿಂತ ಹೆಚ್ಚಾಗಿ ಒಂದು ನಿರ್ದಿಷ್ಟ ಸಿದ್ಧಾಂತಕ್ಕೆ ಪೂರಕವಾದ ರಾಷ್ಟ್ರೀಯತೆಯನ್ನು ಹೇರುವ ಆತಂಕವಿದೆ. ಈ ಮೂಲಕ ಹಿಂದಿಗೆ ಮಣೆ ಹಾಕುತ್ತಾ ಬುದ್ಧ, ಬಸವ, ಸೂಫಿ ಸಂತರ, ಪೆರಿಯಾರ್, ನಾರಾಯಣ ಗುರು, ಶಾಹು ಮಹಾರಾಜ, ಜ್ಯೋತಿಬಾ ಫುಲೆ, ಸಾವಿತ್ರಿ ಬಾಯಿ ಫುಲೆ, ಭಗತ್‌ಸಿಂಗ್, ಗಾಂಧಿ, ಕುವೆಂಪು, ಅಂಬೇಡ್ಕರ್ ಮತ್ತಿತರ ಪ್ರಗತಿಪರರ ಜೀವನಗಾಥೆಗಳ ಪಠ್ಯಗಳನ್ನು ನೇಪಥ್ಯಕ್ಕೆ ಸರಿಸಿ, ಅನಗತ್ಯ ವಿಷಯಗಳ ಪಠ್ಯಗಳನ್ನು ಮುನ್ನೆಲೆಗೆ ತರುತ್ತಿರುವುದು ಎದ್ದು ಕಾಣುತ್ತಿದೆ. ಒಟ್ಟಿನಲ್ಲಿ ಕುವೆಂಪು ಅಂದು ಕಂಡ ಮನುಜ ಮತದ ಕನಸು ಎಂದು ಮತೀಯವಾದದ ಸುಳಿಯಲ್ಲಿ ಸಿಲುಕುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.

***ಯುಗಯುಗದ ದಾರಿದ್ರ್ಯಭಾರದಿಂ ಬೆನ್ ಬಾಗಿ***
***ಗೋಳಿಡುವ ಬಡಜನರೇ, ಏಳಿರೈ, ಏಳಿ!***
***ಶ್ರೀಮಂತರಡಿಗಳಡಿ ಹುಡಿಯಲ್ಲಿ ಹೊರಳಾಡಿ***
***ಕುಸಿದು ಕುಗ್ಗಿದವರೆಲ್ಲ ಸಂತಸವ ತಾಳಿ***
**(ಹೊಸಬಾಳಿನ ಗೀತೆ)**

ಯುಗಯುಗಗಳಿಂದಲೂ ಬಡವರು ಶ್ರೀಮಂತರು ಮತ್ತು ಅಧಿಕಾರಶಾಹಿಯ ಅಡಿಯಲ್ಲಿ ತುಳಿತಕ್ಕೆ ಒಳಗಾಗಿದ್ದಾರೆ. ಆದ್ದರಿಂದ ತುಳಿತಕ್ಕೊಳಗಾದ ಜನ ಎಚ್ಚೆತ್ತುಕೊಂಡರೆ ಜಡಗೊಂಡ ಈ ಸಮಾಜದಲ್ಲಿ ಚಲನೆಯುಂಟಾಗುತ್ತದೆ. 'ಬಡ ಜನರೇ ಏಳಿರೈ ಏಳಿ'

ಎನ್ನುವ ಮೂಲಕ ಜಡ ಹಿಡಿದ ಸಮಾಜವನ್ನು ಎಚ್ಚರಿಸುತ್ತಿದ್ದಾರೆ. ಕುಸಿದು ಕುಗ್ಗಿದವರು ಮತ್ತೆ ಎದ್ದು ನಿಂತಾಗ ಮಾತ್ರ ಸಮಾಜದಲ್ಲಿ ಹೊಸಗಾಳಿ ಬೀಸಲು ಸಾಧ್ಯ ಎಂಬುದನ್ನು ಈ ಕವಿತೆ ಕಟ್ಟಿಕೊಡುತ್ತದೆ.

ಪುರೋಹಿತಶಾಹಿ ಶಾಸ್ತ್ರಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ತೀವ್ರವಾಗಿ ಖಂಡಿಸುತ್ತಾರೆ. ಧರ್ಮಶಾಸ್ತ್ರ ಮಾನವ ಬದುಕಿಗೆ ಅನಿವಾರ್ಯ ಎಂಬಂತಹ ಅಧಿಕಾರ ಪಡೆದುಕೊಂಡು ಬಿಟ್ಟಿದೆ. ಧಾರ್ಮಿಕ ಸಂಸ್ಥೆಗಳು ಧರ್ಮಶಾಸ್ತ್ರಗಳನ್ನು ನಿರಂತರವಾಗಿ ಪೋಷಿಸುತ್ತಾ ಭಕ್ತರನ್ನು ಶೋಷಿಸುತ್ತವೆ. ಈ ಅಧಿಕಾರವನ್ನು ಅಧಿಕಾರಯುತ ದನಿಯಲ್ಲಿಯೇ ಪ್ರಬಲವಾಗಿ ಪ್ರಶ್ನಿಸುತ್ತಾರೆ.

***ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?***
***ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?***

ಎನ್ನುವಲ್ಲಿ ಧರ್ಮ ಮತ್ತು ಶಾಸ್ತ್ರಗಳ ಹೆಸರಿನಲ್ಲಿ ನಡೆಯುವ ಮೌಢ್ಯ ಹಾಗೂ ಶೋಷಣೆಯನ್ನು ನೇರವಾಗಿ ಪ್ರಶ್ನಿಸಿದ್ದಾರೆ. ಬಾಯಾರಿದವನಿಗೆ ನೀರು ಕೊಡಲು ಅಥವಾ ಕಷ್ಟದಲ್ಲಿರುವವನ ಕಣ್ಣೀರು ಒರೆಸಲು ಯಾವುದೇ ಧರ್ಮಗ್ರಂಥದ ಅನುಮತಿ ಬೇಕಿಲ್ಲ. ಇದು ಮನುಷ್ಯತ್ವದ ಸಹಜ ಗುಣವಾಗಬೇಕು. ಧರ್ಮವನ್ನು ವ್ಯವಹಾರವಾಗಿಸಿಕೊಂಡಿರುವ ಪುರೋಹಿತಶಾಹಿಯ ಅಧಿಕಾರವನ್ನು ಪ್ರಬಲವಾಗಿ ಪ್ರಶ್ನೆ ಮಾಡಿರುವುದನ್ನು ಕಾಣುತ್ತೇವೆ. ಇಲ್ಲಿ ಶಾಸ್ತ್ರಗಳಿಗಿಂತ ಮನುಷ್ಯತ್ವವೇ ದೊಡ್ಡದು ಎಂಬ ಸಂದೇಶ ಇಲ್ಲಿದೆ.

***ನೀರಡಿಸಿ ಬಂದ ಸೋದರನಿಗೆ ನೀರು ಕೊಡಲು***
***ಮನುಧರ್ಮಶಾಸ್ತ್ರವೆನಗೊರೆಯ ಬೇಕೇನು?***
***ನೊಂದವರ ಕಂಬನಿಯನೊರಸಿ ಸಂತೈಸುವೊಡೆ***
***ಶಾಸ್ತ್ರಪ್ರಮಾಣವದಕಿರಲೆ ಬೇಕೇನು?*** **(ಯಾವ ಕಾಲದ ಶಾಸ್ತ್ರವೇನು ಹೇಳಿದರೇನು)**

ವೈಚಾರಿಕ ಜಾಗೃತಿ ಮತ್ತು ಸಮಾಜ ಸುಧಾರಣೆಯನ್ನು ಕುರಿತು ಮಾನವೀಯತೆಯ ಕತ್ತು ಹಿಸುಕುತ್ತಿರುವ ಶಾಸ್ತ್ರದ ಅಗತ್ಯವಿದೆಯೇನು? ಎಂಬ ಪ್ರಶ್ನೆಯ ಮೂಲಕ ಅವರು ಮನುಷ್ಯತ್ವವನ್ನು ಗೌರವಿಸದ, ಕೇವಲ ಕಟ್ಟುಪಾಡುಗಳಿಗೆ ಅಂಟಿಕೊಂಡಿರುವ ಸಂಪ್ರದಾಯಗಳನ್ನು ಬಲವಾಗಿ ವಿರೋಧಿಸುತ್ತಾರೆ.

ಕನ್ನಡ ಭಾಷೆಯಂತೆಯೇ ಕರ್ನಾಟಕದ ಬಗೆಗಿನ ನಿಷ್ಕಲ್ಮಶ ಅಭಿಮಾನ ಕುವೆಂಪು ಅವರಿಗಿತ್ತು. ಇವರು ಕರ್ನಾಟಕ ಏಕೀಕರಣದ ಸಮಯದಲ್ಲಿ ನೀಡಿದ ಸ್ಫೂರ್ತಿ ಅಪ್ರತಿಮವಾದುದು. ಈ ದೇಶದ ಸ್ವಾತಂತ್ರ್ಯ ಚಳುವಳಿಯ ಜೊತೆಗೆ ಅದರೊಂದು ಭಾಗವಾಗಿ ಹುಟ್ಟಿಕೊಂಡದ್ದು ಕರ್ನಾಟಕ ಏಕೀಕರಣ ಕಲ್ಪನೆ. ಸ್ವಾತಂತ್ರ್ಯ ಚಳುವಳಿಯ ಮೂಲಕ ಈ ದೇಶ ಪರಕೀಯ ಪ್ರಭುತ್ವದಿಂದ ಬಿಡುಗಡೆ ಪಡೆಯುವುದು ಎಷ್ಟು ಮುಖ್ಯವಾಗಿತ್ತೋ, ವಸಾಹತುಶಾಹಿ ಕಾರಣದಿಂದ ಹರಿದು ಹಂಚಿ ಹೋಗಿದ್ದ ಕರ್ನಾಟಕ ಏಕೀಕೃತ ಕರ್ನಾಟಕವಾಗುವುದು ಅಷ್ಟೇ ಮುಖ್ಯವಾಗಿತ್ತು. ಕರ್ನಾಟಕ ಎಂಬುದು ಕೇವಲ ಭೂಪಟದ ಭಾಗವಲ್ಲ. ಅದೊಂದು ಸಾಂಸ್ಕೃತಿಕ ಅಸ್ಮಿತೆ ಎಂಬುದನ್ನು ಅವರು ಪ್ರತಿಪಾದಿಸಿದವರು.

***ಬೆದರದಿರು; ಬೆದರದಿರು; ನಾನಿಹೆನು, ಓ ದೇವಿ।***
***ಉದಯಿಸುವನೋರ್ವ ಕವಿ ನಿನ್ನುದರ ಭೂಮಿಯಿಂದದುಭುತದಿ***

*ಎಂದು ಸಾಂತ್ವಾನಿಸುತ್ತಾರೆ.*

***ಕರ್ನಾಟಕ ಎಂಬುದೇನು***
***ಹೆಸರೆ ಬರಿಯ ಮಣ್ಣಿಗೆ?***
***ಮಂತ್ರ ಕಣಾ। ಶಕ್ತಿ ಕಣಾ।***
***ತಾಯಿ ಕಣಾ। ದೇವಿ ಕಣಾ।***
***ಬೆಂಕಿ ಕಣಾ। ಸಿಡಿಲು ಕಣಾ।***
***ಕಾವ ಕೊಲುವ ಒಲವ ಬಲವ***
***ಪಡೆದ ಚಲದ ಚಂಡಿ ಕಣಾ***
***ಖುಷಿಯ ಕಾಣ್ಬ ಕಣ್ಣಿಗೆ!*** **( ಅಖಂಡ ಕರ್ನಾಟಕ)**

ಈ ಸಾಲುಗಳು ಕೇವಲ ಭಾವನಾತ್ಮಕವಲ್ಲ, ಬದಲಿಗೆ ಈ ನಾಡಿನ ಇತಿಹಾಸ, ಸಂಸ್ಕೃತಿ ಮತ್ತು

ಚೈತನ್ಯದ ಪ್ರತೀಕವಾಗಿವೆ. ಕರ್ನಾಟಕವನ್ನು ಕೇವಲ ಮಣ್ಣಿನ ರಾಶಿಯನ್ನಾಗಿ ನೋಡದೆ ಅದನ್ನೊಂದು ದೈವಿಕ ಶಕ್ತಿಯನ್ನಾಗಿ ನೋಡುತ್ತಾರೆ. ಕೇವಲ ತಮ್ಮ ಸ್ವಾರ್ಥಸಾಧನೆಗೆ ಬಳಸಿಕೊಳ್ಳುವ ಶಕ್ತಿಗಳ ಬಗೆಗೆ ಕುವೆಂಪು ಮತ್ತೆ ಮತ್ತೆ ಎಚ್ಚರಿಸುತ್ತಾ ಎಚ್ಚರದ ಪ್ರಜ್ಞೆಯಾಗಿ ತಮ್ಮ ಕವಿತೆಗಳಲ್ಲಿ ಕಾಣಿಸಿಕೊಳ್ಳುತ್ತಾರೆ.

***ಬಾರಿಸು ಕನ್ನಡ ಡಿಂಡಿಮವ***
***ಓ ಕರ್ನಾಟಕ ಹೃದಯ ಶಿವ!***
***ಸತ್ತಂತಿಹರನು ಬಡಿದೆಚ್ಚರಿಸು***
***ಕಚ್ಚಾಡುವರನು ಕೂಡಿಸಿ ಒಲಿಸಿ***
***ಹೊಟ್ಟೆಯ ಕಿಚ್ಚಿಗೆ ಕಣ್ಣೀರ್ ಸುರಿಸು;***
***ಒಟ್ಟಿಗೆ ಬಾಳುವ ತೆರದಲಿ ಹರಸು!* (ಬಾರಿಸು ಕನ್ನಡ ಡಿಂಡಿಮ)**

ಕುವೆಂಪು ಅವರ ಸಾಮಾಜಿಕ ಆಸಕ್ತಿ ಅನೇಕ ಮೂಲಗಳಿಂದ ಪ್ರೇರಣೆ ಪಡೆದು ಅನೇಕ ನೆಲೆಗಳಲ್ಲಿ ವ್ಯಕ್ತವಾಗಿದ್ದರೂ ಅದರ ಕೇಂದ್ರದಲ್ಲಿ ಕನ್ನಡ–ಕರ್ನಾಟಕ–ರೈತ. "ಕನ್ನಡ ಅಳಿಸೆವು, ಕರ್ನಾಟಕ ಬಿಡೆವು, ಈ ಇಡೀ ಕರ್ನಾಟಕಕ್ಕೆ ರೈತನೇ ಯಜಮಾನ" ಎನ್ನುವ ದಾಟಿ ಕುವೆಂಪು ಅವರದು. ಕುವೆಂಪು ಅವರಿಗೆ ರೈತನೆಂದರೆ ಅಪಾರ ಅಭಿಮಾನ ಕಾಳಜಿ. ಕರ್ಮಜೀವಿಯಾದ ರೈತ ಎಂತಹ ಸನ್ನಿವೇಶದಲ್ಲೂ ತನ್ನ ಕಾಯಕ ನಿಲ್ಲಿಸುವುದಿಲ್ಲ. ಆತನದು ನಿರಂತರ ದುಡಿಮೆ. ಆತನ ಬೆವರಿನ ಫಲವೇ ರಾಜ್ಯದ ಶಕ್ತಿ. ಸಂಸ್ಕೃತಿಯ ಆಸಕ್ತಿ.

***ಬಾಳಿತು ನಮ್ಮೀ ನಾಗರಿಕತೆ ಸಿರಿ***
***ಮಣ್ಣುಣಿ ನೇಗಿಲಿನಾಶ್ರಯದಿ;***
***ನೇಗಿಲ ಹಿಡಿದಾ ಕೈಯಾಧಾರದಿ***
***ದೊರೆಗಳು ದರ್ಪದೊಳಾಳಿದರು***
***ನೇಗಿಲ ಬಲದೊಳು ವೀರರು ಮೆರೆದರು***
***ಶಿಲ್ಪಿಗಳೆಸೆದರು ಕವಿಗಳು ಬರೆದರು***

ಹಸಿವು ಎಂಬುದು ಕೇವಲ ದೈಹಿಕ ಅಗತ್ಯವಲ್ಲ, ಅದು ಒಂದು ಸಾಮಾಜಿಕ ಅನ್ಯಾಯ ಮತ್ತು ಶೋಷಣೆಯ ಸಂಕೇತವಾಗಿದೆ. ಹಸಿವಿನ ಮುಂದೆ ಎಲ್ಲಿಯ ಶೌರ್ಯ, ಎಲ್ಲಿಯ ಸಂಸ್ಕೃತಿ, ಎಲ್ಲಿಯ ಸೃಜನಶೀಲತೆ. ಅನೇಕ ಸಂದರ್ಭಗಳಲ್ಲಿ ಮನುಷ್ಯನು ಎತ್ತರಕ್ಕೆ ಹೋಗದಂತೆ ಮಾಡುವುದೇ ಈ ಅನ್ನದ ಸಮಸ್ಯೆ. ಅದಕ್ಕಾಗಿ ಅನ್ನವನ್ನೀವ ನೇಗಿಲಯೋಗಿಯೇ ಜನರಿರುವ ಇಡೀ ವಿಶ್ವಕ್ಕೆ ಶಕ್ತಿಯನ್ನು ದೃಢತೆಯನ್ನು ತಂದುಕೊಡುವ ಅನ್ನದಾತ. ಅದಕ್ಕೆ ಆತನನ್ನು ಶ್ರೇಷ್ಠತೆಯ ತುತ್ತತುದಿಯಲ್ಲಿ ಕೂರಿಸಿ ತಲೆ ಎತ್ತಿ ನೋಡುತ್ತಾ ಆತನಿಗೊಂದು ಸಲಾಂ ಎಂದ ಕುವೆಂಪು ಅವರ ಪರಿ ಅನನ್ಯವಾದದ್ದು. ನಾವೆಲ್ಲ ತಲೆ ದೂಗಿ, ಚಪ್ಪಾಳೆ ತಟ್ಟುತ್ತಾ ಅಭಿಮಾನದಿಂದ ಮೆಚ್ಚುವಂತದ್ದು.

ಬದುಕಿನ ಮೂಲಾಧಾರ ಶ್ರಮ ಸಂಸ್ಕೃತಿಯಾಗಿದೆ. ಇಂತಹ ಶ್ರಮ ಸಂಸ್ಕೃತಿಯ ಪ್ರತೀಕವಾದ ರೈತನನ್ನು ಕಾವ್ಯರಂಗದ ಪ್ರಧಾನಭೂಮಿಕೆಗೆ ತಂದು ಆತನಿಗೆ 'ನೇಗಿಲಯೋಗಿ' ಎಂದು ಕರೆದ ಮೊಟ್ಟ ಮೊದಲಿಗರು ಕವಿಯೋಗಿ ಕುವೆಂಪು. ಹಾಗೆಯೇ ದೇಶದ ಅಸಂಖ್ಯಾತ ಜನರನ್ನು ಜನರು ಎಂದು ಸಂಭೋಧಿಸದೆ 'ಶ್ರೀ ಸಾಮಾನ್ಯ' ಎಂದು ಗೌರವಪೂರ್ವಕವಾಗಿ ಕರೆಯುತ್ತಾರೆ.

'ಧನ್ವಂತರಿ ಚಿಕಿತ್ಸೆ' ಕೃತಿಯಲ್ಲಿ ಪ್ರತಿಮಾತ್ಮಕವಾಗಿ ರೈತನ ಬದುಕನ್ನು ಕವಿಯು ಚಿತ್ರಿಸಿರುವುದು ಇಂದು ಕಟು ವಾಸ್ತವವಾಗಿದೆ. ಅಂದು ನೇಗಿಲ ಮೇಲೆ ನಿಂತಿದ್ದ 'ನೇಗಿಲ ಧರ್ಮ' ಇಂದು ಅಕ್ಷರಶಃ ಅದೃಶ್ಯವಾಗಿದೆ. ಇಡೀ ದೇಶದ ಬೆನ್ನೆಲುಬಾಗಿದ್ದ ರೈತನ ಬೆನ್ನು ಇಂದು ವ್ಯವಸ್ಥೆಯ ಭಾರಕ್ಕೆ ಬಾಗಿದೆ. ಜಗತ್ತಿಗೆ ಅನ್ನ ನೀಡಿ ಪೋಷಿಸುವ ಹೊಣೆ ಹೊತ್ತಿದ್ದ ಅನ್ನದಾತನನ್ನು ಇಂದು ಬಲಹೀನನನ್ನಾಗಿ ಮಾಡಿ, ಅನಾಥಪ್ರಜ್ಞೆಯಲ್ಲಿ ದೂಡಲಾಗಿದೆ. ಇಂದಿನ ಮನುಷ್ಯನ ಅತಿಯಾದ ದುರಾಸೆಯಿಂದಾಗಿ ಪ್ರಭುತ್ವದ ಜೊತೆಗೆ ಪ್ರಕೃತಿಯೂ ರೈತನ ವಿರುದ್ಧ ನಿಂತಿದೆ. ಸರ್ಕಾರಗಳು ಜಾರಿಗೆ ತರುತ್ತಿರುವ ಹೊಸ ಶಾಸನಗಳು ರೈತರ ಪಾಲಿಗೆ 'ಮರಣಶಾಸನ'ಗಳಾಗಿ ಪರಿಣಮಿಸುತ್ತಿವೆ. ತಮ್ಮ ಹಕ್ಕುಗಳಿಗಾಗಿ ಪ್ರತಿರೋಧ ಒಡ್ಡಿದ ರೈತರ ಪ್ರಾಣವನ್ನೇ ದಂಡದ ರೂಪದಲ್ಲಿ ವಸೂಲಿ ಮಾಡಲಾಗುತ್ತಿದೆ. ಅತ್ಯಂತ ವಿಷಾದದ

ಸಂಗತಿಯೆಂದರೆ, ರೈತರ ಶವಗಳ ಮೇಲೆ ತಮ್ಮ ಪ್ರಭುತ್ವ ಸ್ಥಾಪಿಸುವ ಮತ್ತು ಅವರ ಸಾವನ್ನು ಸಂಭ್ರಮಿಸಿ ಸಮರ್ಥಿಸಿಕೊಳ್ಳುವ ಮಟ್ಟಕ್ಕೆ ಇಂದಿನ ರಾಜಕೀಯ ವ್ಯವಸ್ಥೆ ಅಧಃಪತನಕ್ಕಿಳಿದಿದೆ. ಲೋಕಕ್ಕೆ ಅನ್ನ ನೀಡಲು ತನ್ನ ರಕ್ತವನ್ನೇ ಸುರಿಸುತ್ತಿರುವ ಈ ಕಾಲದ 'ನೇಗಿಲಯೋಗಿ' ಇಂದು ಅತಂತ್ರನಾಗಿದ್ದಾನೆ. ಯಾವ ನೇಗಿಲ ಧರ್ಮ ಇಡೀ ಜಗತ್ತನ್ನು ಕಾಯಬೇಕಿತ್ತೋ, ಅದರ ಕುತ್ತಿಗೆ ಹಿಸುಕುವ ಕೆಲಸ ಇಂದು ಅತ್ಯಂತ ನಾಜೂಕಾಗಿ ನಡೆಯುತ್ತಿದೆ

ಗೋಹತ್ಯೆಯನ್ನು ಕುರಿತು ಕುವೆಂಪು ರೈತರ ಸಾವು, ರೈತರಿಗೆ ನೋವು ತರುತ್ತಿರುವ ಮತ್ತೊಂದು ಆಘಾತವನ್ನುಂಟು ಮಾಡುವ ಸಂಗತಿ ಎಂದಿದ್ದಾರೆ. **"**ಗೋವಧೆ ಪಾಪಕರವಾದರೆ ಉಳಿದ ಪ್ರಾಣಿ ಪಕ್ಷಿಗಳ ವಧೆಯನ್ನೂ ನಿಷೇಧಿಸಬೇಕಾಗುತ್ತದೆ. ಅದು ಸಾಧ್ಯವಾಗುವುದಾದರೆ ಒಳಿತೇ. ಪ್ರಾಣಿವಧೆ ನಿಷೇಧಿಸುವ ಮುನ್ನ ಅದರ ಆರ್ಥಿಕ ಸಾಮಾಜಿಕ ವೈಜ್ಞಾನಿಕ ಹಾಗೂ ತಾತ್ವಿಕ ಮುಖಗಳನ್ನು ಕುರಿತು ಚರ್ಚಿಸಬೇಕಾಗುತ್ತದೆ. ಗೋವು ಸಾಕುವವರು ರೈತರೇ ಹೊರತು, ಧರ್ಮಶಾಸ್ತ್ರ ಕರ್ತೃಗಳಲ್ಲ. ಆದ್ದರಿಂದ ಗೋವಧೆಯನ್ನು ನಿಷೇಧಿಸುವ ಮೊದಲು ರೈತರ ಅಭಿಮತವನ್ನು ಪಡೆಯಬೇಕು.**"**[8] ಕುವೆಂಪು ಅವರ ಈ ಮಾತಿಗೆ ಬೆಲೆ ಎಲ್ಲಿದೆ.

ನಮ್ಮ ಕಾಲದ ತೀವ್ರವಾದ ಬಿಕ್ಕಟ್ಟೆಂದರೆ, ಅದನ್ನು ಕುವೆಂಪು ಅವರ ಮಾತುಗಳಲ್ಲೇ ಹೇಳುವುದಾದರೆ ಮತಿಯ ಬದಲಾಗಿ ಮತವನ್ನು ಅತಾರ್ಕಿಕವಾಗಿ, ಆಕ್ರಮಣಕಾರಿಯಾಗಿ ಹಾಗೂ ಹಿಂಸಾತ್ಮಕವಾಗಿ ಬೆನ್ನುಹತ್ತಿರುವುದು. 'ನೂರು ಮತಗಳ ನೂಕಾಚೆ ದೂರ' ಎಂದಾಗ ಕುವೆಂಪು ಮತವೆಂದರೆ ಕೇವಲ ಧರ್ಮವೆಂದು ವ್ಯಾಖ್ಯಾನಿಸಲಿಲ್ಲ. ಯಾವುದರ ಬಗ್ಗೆ ಕುರುಡು ನಂಬಿಕೆಯನ್ನು ಬೆಳೆಸಿಕೊಳ್ಳುತ್ತೇವೆಯೋ, ನಮ್ಮ ವಿವೇಕವನ್ನು ಬದಿಗಿಟ್ಟು ತೀವ್ರ ಭಾವುಕತೆಯ ಭ್ರಮೆಯಲ್ಲಿ ಒಪ್ಪಿಕೊಳ್ಳುತ್ತೇವೆಯೋ ಅದನ್ನೇ ಅವರು ಮತವೆಂದು ಕರೆದಿದ್ದರು. ವಿಜ್ಞಾನ ದೀವಿಗೆಯೆಂದು ಅವರು ಕರೆದದ್ದು ಪೊಳ್ಳು ಘೋಷಣೆಯಾಗಿರಲಿಲ್ಲ. ಅವರ ಮಾತಿನಲ್ಲಿ ಅದು ಮತಿಯಾಗಿತ್ತು.

ಕುವೆಂಪು ಅವರ 'ರಾಮಾಯಣ ದರ್ಶನಂ', 'ಮಲೆಗಳಲ್ಲಿ ಮದುಮಗಳು' ಅಥವಾ ಅವರ ನಾಟಕಗಳಾಗಲಿ ಎಲ್ಲದರಲ್ಲೂ ಜೀವಪರ ಕಾಳಜಿ ಎದ್ದು ಕಾಣುತ್ತದೆ. "ಏನಾದರಾಗು ಮೊದಲು ಮಾನವನಾಗು" ಎಂಬ ಕವಿವಾಣಿ ಇಂದಿನ ತುರ್ತು ಅಗತ್ಯ. ನಾವು ಕೇವಲ ಭೌತಿಕ ಪ್ರಗತಿಯನ್ನು ಸಾಧಿಸುವುದಲ್ಲ, ವೈಚಾರಿಕ ಪ್ರಜ್ಞೆಯೊಂದಿಗೆ ಮನುಷ್ಯತ್ವವನ್ನು ಬೆಳೆಸಿಕೊಂಡಾಗ ಮಾತ್ರ ಕುವೆಂಪು ಕಂಡ 'ವಿಶ್ವಮಾನವ'ನ ಕನಸು ನನಸಾಗಲು ಸಾಧ್ಯ. ಮೂಲಭೂತ ಅಗತ್ಯಗಳ ಜೊತೆ ವೈಚಾರಿಕ ಪ್ರಜ್ಞೆ ಇಂದಿನ ತುರ್ತು ಅಗತ್ಯ. ನಾವೂ ಬದುಕಿ ಮತ್ತೊಬ್ಬರನ್ನು ಬದಕಲು ಅವಕಾಶ ಮಾಡಿಕೊಡಬೇಕಿದೆ. ಮೂಢನಂಬಿಕೆಗಳನ್ನು ಬಿಟ್ಟು ಬದುಕಿನ ಬಗೆಗಿನ ನಂಬಿಕೆಯನ್ನು ಬೆಳಸಿಕೊಳ್ಳಬೇಕಿದೆ. ಸಾಮರಸ್ಯ ಭಾವ ಬೆಳೆಯಬೇಕಿದೆ. ಸರ್ವರೂ ಸುಖವಾಗಿರಬೇಕೆಂಬ ಆಶಯ ಭಾವದೊಂದಿಗೆ ವಿಶ್ವಮಾನವರಾಗಬೇಕಿದೆ. ಸತ್ಯ, ಶಾಂತಿ, ಅಹಿಂಸೆ ನಿತ್ಯನೂತನವಾಗಬೇಕಿದೆ. ಏನಾದರಾಗು ಮೊದಲು ಮಾನವನಾಗು ಎನ್ನುವ ಕವಿವಾಣಿ ಸಕಾರಗೊಳ್ಳಬೇಕಿದೆ. ವಿದ್ಯೆ ವಿವೇಕವನ್ನು ತಂದುಕೊಡುವುದರ ಜೊತೆಗೆ ವಿನಯವಂತರನ್ನಾಗಿ ಮಾಡಬೇಕಿದೆ. ಪರಸರ ಪ್ರಜ್ಞೆ ಮೂಡಬೇಕಿದೆ. ಇಂತಹ ಪ್ರಸ್ತುತ ಅಗತ್ಯಗಳ ಅನಿವಾರ್ಯತೆ ಇದೆ.

**ಕೊನೆ ಟಿಪ್ಪಣಿಗಳು**


1. ಕುವೆಂಪು. (2004). *ಮನುಜ ಮತ ವಿಶ್ವ ಪಥ.* ಉದಯರವಿ ಪ್ರಕಾಶನ. ಪುಟ 19
2. ಕುವೆಂಪು. (1933). *ಪಾಂಚಜನ್ಯ.* ಉದಯರವಿ ಪ್ರಕಾಶನ.
3. ಕುವೆಂಪು. *ತರುಣರಿರ ಎದ್ದೇಳಿ'* ಪದ್ಯ
4. ಅದೇ.,
5. ಕುವೆಂಪು. *ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ,* ಪುಟ 2

6. ಕುವೆಂಪು. *ಓ, ಬನ್ನಿ, ಸೋದರರೆ, ಬೇಗ ಬನ್ನಿ!.* ಪದ್ಯ
7. ಸತ್ಯನಾರಾಯಣ, ಬಿ.ಆರ್. (2008). *ಕುವೆಂಪು ನುಡಿತೋರಣ.* ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ.
8. ಅದೇ.,